ಶ್ರೀ ಕೆ. ಕೆ. ಗಣಪತಿ.—ಮೈಸೂರಿನಲ್ಲಿಯ ಯಾವ ರೈಲ್ವೇಸ್ಟೇಷನ್ನಿನಿಂದ ಕೊಡಗಿನ ಯಾವ ರೈಲ್ವೇಸ್ಟೇಷನ್ನಿನವರೆಗೆ ರೈಲ್ವೆ ಲೈನಿನ ಸರ್ವೆ ಮಾಡಬೇಕೆಂದಾಗಿದೆ?

ಶ್ರೀ ಸಿ. ಎಂ. ಪೂಣಚ್ಚ.—ಸರ್ವೆ ನಡೆದಿದೆ. ಎಲ್ಲಿಂದ ಎಲ್ಲಿಯವರೆಗೆ ಎಂದು ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಕೆ. ಗಣಪತಿ.—ಮೈಸೂರಿನಲ್ಲಿ ಎಲ್ಲಿಂದ ಸರ್ವೆ ಮಾಡುವಿರಿ?

ಶ್ರೀ ಸಿ. ಎಂ. ಪೂಣಚ್ಚ.—ಬೇಕಾದರೆ ಈ ಮಾಹಿತಿಯನ್ನು ಸಂಗ್ರಹಿಸಿ ಹೇಳಲಾಗುತ್ತದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಕೇಂದ್ರ ಸರ್ಕಾರದಿಂದ ಮೈಸೂರು ಸರ್ಕಾರಕ್ಕೆ ರೈಲ್ವೆ ಲೈನ್ ರಚನೆಯ ಸಂಬಂಧದಲ್ಲಿ ಎಷ್ಟು ಹಣ ಮಂಜೂರಾಗಿ ಕೊಡಲಾಗಿದೆ?

ಅಧ್ಯಕ್ಷರು.—ಅದು ಬೇರೆ ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗುವುದಿಲ್ಲವೆ?

ಶ್ರೀ ಕೆ. ಕೆ. ಗಣಪತಿ.—ಮೈಸೂರು ಸರ್ಕಾರವು ಯಾವ ಪಾಲಿಸಿಯನ್ನು ಇಟ್ಟುಕೊಂಡಿದೆ?

ಅಧ್ಯಕ್ಷರು.—ಅದು ಕೇಂದ್ರ ಸರ್ಕಾರದ ಇಲಾಖೆಗೆ ಸಂಬಂಧಪಟ್ಟ ವಿಷಯವಾಗಿದೆ.

ಶ್ರೀ ಕೆ. ಕೆ. ಗಣಪತಿ.—ಮೈಸೂರು ರಾಜ್ಯದಲ್ಲಿ ಯಾವ ಯಾವ ರೈಲ್ವೆ ಲೈನ್ ರಚನೆಯ ಕೆಲಸ ಸಾಧನೆಯಾಗಿಲ್ಲವೋ ಅಂಥವುಗಳ ರಚನೆಯ ಬಗ್ಗೆ ಸರ್ಕಾರದವರು ಯಾವ ಪಾಲಿಸಿಯನ್ನಿಟ್ಟುಕೊಂಡಿದ್ದಾರೆ?

ಅಧ್ಯಕ್ಷರು.—ಮೈಸೂರು ಸರ್ಕಾರ ಯಾವ ಹೊಸ ರೈಲ್ವೆ ಲೈನಿನ ಬಗ್ಗೆ ಶಿಫಾರಸು ಮಾಡಿದ್ದಾರೆ ಎಂದು ಪ್ರಶ್ನೆ ಕೇಳಬಹುದು.

ಶ್ರೀ ಬಿ. ಹುಚ್ಚೇಗೌಡ.—ಈ ಹೊಸ ರೈಲ್ವೆ ಲೈನಿನ ರಚನೆಯ ವಿಚಾರ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಮಾವೇಶಗೊಂಡು ಮೈಸೂರಿನಲ್ಲಿ ಸರ್ವೆ ಕೆಲಸ ಆಗುತ್ತಿದೆಯೇ?

ಶ್ರೀ ಸಿ. ಎಂ. ಪೂಣಚ್ಚ.—ಇಲ್ಲ. ಇದನ್ನು ಸ್ಪಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯ ಕರಡು ತಯಾರು ಮಾಡುವಾಗ ಮೈಸೂರು ಸರ್ಕಾರವು ಇದನ್ನು ಶಿಫಾರಸ್ಸು ಮಾಡಿತ್ತು.

ಶ್ರೀ ಕೆ. ಕೆ. ಗಣಪತಿ.—ಯಾವ ನಿರ್ದಿಷ್ಟವಾದ ಪ್ರದೇಶವನ್ನು ಗೊತ್ತುಮಾಡಿಕೊಂಡು ಸರ್ಕಾರವು ಸರ್ವೆ ಕೆಲಸವನ್ನು ಪ್ರಾರಂಭ ಮಾಡಿದೆ?

Mr. SPEAKER—Order Order.

ಶ್ರೀ ಕೆ. ಕೆ. ಗಣಪತಿ.—ಕೊಡಗಿನಲ್ಲಿ ಸರ್ವೆ ಮಾಡುವಾಗ ಎಲ್ಲಿ ರೈಲ್ವೆ ಲೈನ್ ರಚನೆಯಾಗಬೇಕೆಂಬುದನ್ನು ನಿರ್ಧರಿಸಲಾಗಿದೆಯೇ?

ಅಧ್ಯಕ್ಷರು.—ಇದು ರೈಲ್ವೆ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ.

School for Pariyarnagar.

Q.—451. Sri R. MUNISWAMIAH (Bangalore North—Scheduled Castes).—

Will the Government be pleased to state :—

(*a*) whether a school with two teachers has been sanctioned to the Pariyarnagar, Devarajeevanahalli, Kasaba Hobli, Bangalore North Taluk;

(*b*) whether the people have not promised to arrange for a building of their own in that village?

A.—Sri Kadidal MANJAPPA (Minister for Education).—

(*a*) No.

(*b*) The villagers are ready to meet half the cost of the building.

Sri R. MUNISWAMIAH.—Sir, I have no supplementaries.

Supply of Electric Power for Small-Scale and Rural Industries.

Q.—205. Sri S. KARIYAPPA (Virupakshapura).—

Will the Government be pleased to state :—

(*a*) whether it is a fact that the supply of electric power for small-scale industries or rural industries can only be made on the recommendation of the Department of Industries;

(*b*) if so, when this arrangement was brought into vogue;

(*c*) since the introduction of this new procedure, the number of applications received for supply of power for small-scale or rural industries;

(*d*) the number of cases (*i*) that have been supplied with power and (*ii*) the number of cases in which supply of power has been refused?

A.—Sri H. K. VEERANNA GOWDH (Minister for Public Works).—

(*a*) Yes.

(*b*) October 1956.

(*c*) 95.

(*d*) (*i*) 80.
(*ii*) 15.

ಶ್ರೀ ಎಸ್. ಕರಿಯಪ್ಪ.—ಸಣ್ಣಸಣ್ಣ ಉದ್ಯೋಗಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ವಿಚಾರದಲ್ಲಿ ಈಗ ಅನುಸರಿಸಬೇಕೆಂದಿರುವ ಧೋರಣೆಯು ಬಹಳ ಅನಾನುಕೂಲವಾಗುವುದು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಅಭಿಪ್ರಾಯದ ಮಾತು.

ಶ್ರೀ ಎಸ್. ಕರಿಯಪ್ಪ.—ಹಾಗೆ ಅನುಸರಿಸಲಾಗುವುದೆಂದು ಅಶ್ವಾಸನೆ ಕೊಡಿಸಿದ್ದೀರಲ್ಲಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಂಸ್ಥಾನದಲ್ಲಿ ಬೆಳೆಯುತ್ತಿರುವ ಸಣ್ಣ ಕೈಗಾರಿಕೆಗಳಿಗೆ ಯಾವ ರೀತಿ ಸಮರ್ಪಕ ಏರ್ಪಾಡು ಮಾಡಬೇಕೆಂಬ ಯೋಚನೆಯನ್ನು ಕೆಲವು ಕಾಲದಿಂದ ಸಂಬಂಧಪಟ್ಟ ಅಧಿಕಾರಿಗಳು ಮಾಡುತ್ತಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಸಣ್ಣಪುಟ್ಟ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡತಕ್ಕದ್ದು ಬಹಳ ಅಗತ್ಯವಾದುದು. ಆದ್ದರಿಂದ ಕೈಗಾರಿಕಾ ಇಲಾಖೆಯು ತೀವ್ರವಾಗಿ ಶಿಫಾರಸುಗಳನ್ನು ಕಳಿಸಿಕೊಡಬೇಕೆಂಬುದಾಗಿ ತೀರ್ಮಾನ ಮಾಡಿದ್ದಾರೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಕಾರ್ಯ ನಡೆದಿದೆ.

ಶ್ರೀ ಎಸ್. ಕರಿಯಪ್ಪ.—ಕೈಗಾರಿಕೆಗಳನ್ನು ತೆಗೆದು ಕೊಳ್ಳುವಾಗ ಸರಕಾರದಲ್ಲಿ ಪವರ್ ಒದಗಿಸದಿದ್ದರೆ ಎಲ್ಲರಿಗೂ ಕಷ್ಟವಾಗುತ್ತದೆ. ಸಾಧ್ಯವಾದಮಟ್ಟಿಗೆ ದೊಡ್ಡ ಕೈಗಾರಿಕೆಗಳಿಗಿಂತ ಮೊದಲು ಸಣ್ಣ ಕೈಗಾರಿಕೆಗಳಿಗೆ ಪವರ್ ಒದಗಿಸಬೇಕೆಂಬ ಅಂಶವು ಗಮನದಲ್ಲಿದೆಯೇ !

ಶ್ರೀ ಎಚ್. ಕೆ. ವೀರಣ್ಣಗೌಡ.—ಶಿಫಾರಸ್ಸು ಇಲ್ಲದಿದ್ದರೆ ನಿಧಾನವಾಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಸಣ್ಣ ಕೈಗಾರಿಕೆಗಳಿಗೆ ಸರಕಾರದಲ್ಲಿ ಪವರ್ ಒದಗಿಸದಿದ್ದರೆ ಅದರಲ್ಲಿ ತೊಡಗಿಸಿದ ಬಂಡವಾಳಕ್ಕೆ ಪ್ರತಿಫಲ ಬಾರದೆಹೋಗಿ ತೊಂದರೆಯಾಗುವುದಿಲ್ಲವೇ !

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ತಮ್ಮ ಅಭಿಪ್ರಾಯ. ಡೈರೆಕ್ಟರು ಶಿಫಾರಸ್ಸು ಮಾಡಿದರೆ ಸಿಕ್ಕುತ್ತದೆ. ಬುದ್ಧಿವಂತಿಕೆಯಿಲ್ಲದೆ ಕೆಲಸ ಪ್ರಾರಂಭಿಸಿದರೆ ನಷ್ಟವಾಗುತ್ತದೆ.

9 A.M.

ಶ್ರೀ ಎಸ್. ಕರಿಯಪ್ಪ.—ಸರ್ಕಾರದ ನೀತಿ ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳಿಗೆ ಪ್ರೋತ್ಸಾಹ ಕೊಡಬೇಕೆಂಬುದಲ್ಲವೇ !

ಅಧ್ಯಕ್ಷರು.—ತಮ್ಮ ಈ ಉಪಪ್ರಶ್ನೆ ಮುಖ್ಯ ಪ್ರಶ್ನೆಗೆ ಸಂಬಂಧಿಸಿಲ್ಲ.

ಶ್ರೀ ಎಸ್. ಕರಿಯಪ್ಪ.—ಹೀಗೆ ಈ ಕೈಗಾರಿಕೆಗಳ ವಿಷಯದಲ್ಲಿ ಪವರನ್ನು ನಪ್ಲೈ ಮಾಡುವುದು ನಿಧಾನವಾಗುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ !

ಶ್ರೀ ಹೆಚ್. ಕೆ. ವೀರಣ್ಣಗೌಡ.—ರೂಲ್ಸ್ ಪ್ರಕಾರ ನಪ್ಲೈ ಮಾಡುವುದೇ ಸರ್ಕಾರದ ನೀತಿಯಾಗಿದೆ.

ಶ್ರೀ ಎಸ್. ಕರಿಯಪ್ಪ.—ಈ ರೀತಿ ಪವರ್ ನಪ್ಲೈ ಮಾಡುವುದಕ್ಕೆ ಎಷ್ಟು ಕಾಲ ಬೇಕು ? ತಿಂಗಳಾನಗಟ್ಟಲೆ ನಿಧಾನವಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಅಧ್ಯಕ್ಷರು.—ಯಾವುದಾದರೂ ಒಂದು ವಿಶಿಷ್ಟ ನಂದರ್ಭವನ್ನು ಹೇಳಿ ಉಪಪ್ರಶ್ನೆಯನ್ನು ಕೇಳಿರಿ.

ಶ್ರೀ ಎಸ್. ಕರಿಯಪ್ಪ.—ಈಗ ಕಾನಕಾನಹಳ್ಳಿಯಲ್ಲಿ ಗೋವಿಂದಪ್ಪ ಎಂಬವರು ಈ ರೀತಿ ಆರು ತಿಂಗಳುಗಳಿಂದಲೂ ಪವರಿಗಾಗಿ ಅಪ್ಲೈ ಮಾಡಿದ್ದರೂ ಅವರಿಗೆ ಇನ್ನೂ ಕೊಟ್ಟಿಲ್ಲ. ಇದಕ್ಕೆ ಕಾರಣವೇನು !

ಶ್ರೀ ಹೆಚ್. ಕೆ. ವೀರಣ್ಣಗೌಡ.—ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರೆ ಇದನ್ನು ಪರಿಶೀಲಿಸಿ ಅನುಕೂಲಮಾಡಲು ಪ್ರಯತ್ನಪಡುತ್ತೇನೆ.

Sri H. S. METGUD.—Do the Government contemplate supply of electric power for the whole of the new Mysore State for such small-scale industries ?

Sri H. K. VEERANNA GOWDH.—The question will be considered if and when applications are received, of course with the recommendation of the Minister for Industries and the Director, Small-scale Industries.

ಶ್ರೀ ವಿ. ಆರ್. ನಾಯ್ಡು.—ಈಗ ನಮ್ಮ ಮೈಸೂರು ದೇಶದಲ್ಲಿ ಪವರ್ ಅಭಾವವೇನೂ ಇಲ್ಲವಲ್ಲ !

ಅಧ್ಯಕ್ಷರು.—ನಮ್ಮ ಮೈಸೂರು ಎಂದರೆ ಹಳೆಯದೋ, ಹೊಸದೋ ?

ಶ್ರೀ ವಿ. ಆರ್. ನಾಯ್ಡು.—ಈ ಸ್ಮಾರ್ಸ್ಕೇಲ್ ಇಂಡಸ್ಟ್ರಿಗಳಿಗೆ ಪವರ್ ನಪ್ಲೈ ಮಾಡಲು ನಮ್ಮ ನಂಸ್ಥಾನದಲ್ಲಿ ಅದರ ಅಭಾವವಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಭಾವವಿದೆ.

ಶ್ರೀ ವಿ. ಆರ್. ನಾಯ್ಡು.—ನಮ್ಮ ರಾಜ್ಯದಲ್ಲಿಯೇ ಇರುವ ಶಿವನಸಮುದ್ರ, ಜೋಗ್‌ಫಾಲ್ಸ್ ಇವುಗಳಿಂದ ಬೇಕಾದಷ್ಟು ಪವರ್ ನಪ್ಲೈ ಆಗುತ್ತಿಲ್ಲವೇ !

ಶ್ರೀ ಹೆಚ್. ಕೆ. ವೀರಣ್ಣಗೌಡ.—ನಮ್ಮ ದೇಶಕ್ಕೆ ನಾಕಾಗುವಷ್ಟು ಪವರ್ ಉತ್ಪತ್ತಿಯಾಗಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಈಗ ಮಾನ್ಯ ಮಂತ್ರಿಗಳು ಡೈರಕ್ಟರ ಶಿಫಾರಸು ನೋಡಿಕೊಂಡು, ಪವರ್ ಕೃಪಾಸಿಟಿ ನೋಡಿಕೊಂಡು ಈ ರೂರಲ್ ಇಂಡಸ್ಟ್ರಿಗಳಿಗೆ ಪವರ್ ಕೊಡುತ್ತಾರೆಂದು ತಿಳಿಸಿದರು. ಆದರೆ ಡೈರೆಕ್ಟರೇ ಶಿಫಾರಸು ಮಾಡದಿದ್ದರೆ ಏನುಮಾಡುವುದು, ಸ್ವಾಮೀ !

ಅಧ್ಯಕ್ಷರು.—ಅದು ಊಹೆಯ ಮಾತಾಯಿತು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಹೈಪೊಥೆಟಿಕಲ್ ಅಲ್ಲ, ಸ್ವಾಮಿ. ಡೈರೆಕ್ಟರು ಶಿಫಾರಸು ಮಾಡದೆ ಈ ರೀತಿ ಮಾಡಲು ಯಾರು ಜವಾಬ್ದಾರರು ಎಂಬುದನ್ನು ಹೇಳುವರೇ !

ಅಧ್ಯಕ್ಷರು.—ಅದೂ ಊಹೆಯ ಪ್ರಶ್ನೆ, ಅದನ್ನು ಕೇಳಕೂಡದು. Such hypothetical questions cannot be allowed.

Sri H. S. METGUD.—Has it come to the notice of the Government that in Bombay-Karnatak as well as other areas where electricity is available, power is not supplied to such industries?

Sri H. K. VEERANNA GOWDH.—As already stated, the question will certainly be considered when applications are received.

Sri H. S. METGUD.—When such applications have been received, has the Government moved in the matter and consulted the Director of Industries for the supply of electricity ?

Sri H. K. VEERANNA GOWDH.—I do not suppose there was any need to consult the Director, because there was no application. Government is not aware of any applications having been received.

Sri H. S. METGUD.—Is it necessary that people should apply before supply of power is decided for such industries ?